ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸ್ಥಾಪನೆ

1028 - ಶ್ರೀ ಎಸ್. ಕುಮಾರ್‌ಬಂಗಾರಪ್ಪ (ಸೊರಬ) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಚಲನಚಿತ್ರ ಅಕಾಡೆಮಿಯನ್ನು ಸ್ಥಾಪಿಸಲು ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ವಾರ್ತಾ ಹಾಗೂ ಪ್ರಚಾರ ಸಚಿವರು) :

ಅ) ಹೌದು.

ಆ) ಚಲನಚಿತ್ರ ಅಕಾಡೆಮಿ ರಚನೆ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ ವರದಿಗಾರರ ತರಬೇತಿ

1029 - ಶ್ರೀ ಐ.ಎಂ. ಜಯರಾಮಶೆಟ್ಟಿ (ಬೈಂದೂರು) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಪಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ ಎಲ್ಲಾ ಜಿಲ್ಲೆಯಲ್ಲಿ ವರದಿಗಾರರ ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿದೆಯೆ? (ವಿವರ ಒದಗಿಸುವುದು)

ಆ) ಹಾಗಿದ್ದಲ್ಲಿ ತರಬೇತಿ ಕಾರ್ಯಾಗಾರ ಏರ್ಪಡಿಸಲು ಕ್ರಮ ಕೈಗೊಳ್ಳುವುದೇ?

ಇ) ಕರ್ನಾಟಕ ಪತ್ರಿಕಾ ಅಕಾಡೆಮಿಗೆ ಎಷ್ಟು ಅನುದಾನ ಸರ್ಕಾರ ನೀಡುತ್ತಿದೆ?

ಈ) ಅನುದಾನ ಹೆಚ್ಚಿಸಲು ಸರ್ಕಾರ ಯೋಜಿಸುತ್ತಿದೆಯೇ?

ಶ್ರೀ ಎಂ. ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಇಲ್ಲಾ

ಆ) ಎಲ್ಲಾ ಜಿಲ್ಲೆಗಳಲ್ಲಿ ಇಂತಹ ತರಬೇತಿ ಏರ್ಪಡಿಸುವ ಉದ್ದೇಶವನ್ನು ಪತ್ರಿಕಾ ಅಕಾಡೆಮಿ ಹೊಂದಿದೆ.

ಇ) ಪ್ರತಿ ವರ್ಷ ರೂ. 5.00 ಲಕ್ಷ ಅನುದಾನ ನೀಡಲಾಗುತ್ತಿದೆ.

ಇ) ಮತು ಈ) ಪ್ರತಿ ಸಾಲಿನಲ್ಲಿ ಕೊಡುವ ಅನುದಾನವಲ್ಲದೆ 1996-97ನೇ ಸಾಲಿಗೆ ರೂ. 5.00 ಲಕ್ಷ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲಾಗಿದೆ.